6.	ಬೆಳಗಾಂ	-	1
7.	ಧಾರವಾಡ	-	1
8.	ಬಿಜಾಪುರ	-	2
9.	ಕಾರವಾರ	-	1
10.	ಕೋಲಾರ	-	1
11.	ತುಮಕೂರು	-	5
12.	ಬೀದರ್	-	1
13.	ಮೈಸೂರು	-	1
	ಒಟ್ಟು	-	25

ಸರ್ಕಾರಿ ಜೂನಿಯರ್ ಕಾಲೇಜುಗಳು

ರಾಜ್ಯದಲ್ಲಿ 1995-96ನೇ ಸಾಲಿಗೆ ಯಾವುದೇ ಹೊಸ ಸರ್ಕಾರಿ ಕಿರಿಯ ಕಾಲೇಜುಗಳನ್ನು ಪ್ರಾರಂಭಿಸಿರುವುದಿಲ್ಲ.

ಇ) ಚಿಕ್ಕಪಡಸಲಗಿಯಲ್ಲಿ ಖಾಸಗಿ ಸಂಯುಕ್ತ ಪದವಿ ಪೂರ್ವ ಕಾಲೇಜು ಮಂಜೂರಾತಿಯ ಪ್ರಸ್ತಾವನೆಯನ್ನು ಸರ್ಕಾರ ಪರಿಗಣಿಸಿಲ್ಲ. ಗೋಟೆಯಲ್ಲಿ ಪ್ರಾರಂಭಿಸುವ ಬಗ್ಗೆ ಯಾವುದೇ ಪ್ರಸ್ತಾವನೆ ಸರ್ಕಾರಕ್ಕೆ ಬಂದಿಲ್ಲ.

ವಿ.ಡಿ. ಮತ್ತು ಏಡ್ಸ್ ರೋಗಗಳು

159 - ಶ್ರೀ ಬಿ. ಶಿವಕುಮಾರ್ (ಕೆರೆಗೊಡು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಜಾಗದಲ್ಲಿ ವಿ.ಡಿ. ಮತ್ತು ಏಡ್ಸ ರೋಗಗಳ ಪ್ರಕರಣಗಳು ಪತ್ತೆಯಾಗಿವೆಯೊ?

ಆ) ಈ ರೋಗಗಳನ್ನು ನಿವಾರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಇ) ಈ ರೋಗಗಳು ನಿಯಂತ್ರಣದಲ್ಲಿವೆಯೇ ಅಥವಾ ಹರಡುತ್ತಿವೆಯೇ?

ಡಾ: ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ ಲೈಂಗಿಕ ರೋಗ ಪ್ರಕರಣಗಳು ಎಲ್ಲಾ ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ಪತ್ತೆಯಾಗಿವೆ ಮತ್ತು ಏಡ್ಸ ರೋಗದ ಪ್ರಕರಣಗಳು ಈ ಕೆಳಕಂಡ ಜಿಲ್ಲೆಗಳಿಂದ ಪತ್ತೆ ಮಾಡಲಾಗಿದೆ:-

ಬೆಂಗಳೂರು, ದಕ್ಷಿಣ ಕನ್ನಡ, ಗುಲ್ಬರ್ಗಾ, ಚಿಕ್ಕಮಗಳೂರು, ಧಾರವಾಡ, ಉತ್ತರ ಕನ್ನಡ, ರಾಯಚೂರು, ಶಿವಮೊಗ್ಗ, ಬೀದರ್, ಮಂಡ್ಯ, ಮೈಸೂರು, ಚಿತ್ರದುರ್ಗ ಗಳಲ್ಲಿ ಪತ್ತೆಯಾಗಿವೆ.

ಆ) ರಾಜ್ಯದಲ್ಲಿ ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ಒಟ್ಟು 26 ಲೈಂಗಿಕ ರೋಗಗಳ ಚಿಕಿತ್ಸಾಲಯಗಳಿದ್ದು ಇವುಗಳ ಸೇವೆಗಳನ್ನು ಉತ್ತಮಪಡಿಸಲಾಗುತ್ತಿದೆ. ಹಾಗೂ ಲೈಂಗಿಕ ಚಿಕಿತ್ಸಾಲಗಳಿಗೆ ಬರುವ ರೋಗಿಗಳಿಗೆ ಸಮೂಹ ಮಾಧ್ಯಮ ಶಿಕ್ಷಣ ಮತ್ತು ಸುರಕ್ಷಿತ ಲೈಂಗಿಕ ವಿಧಾನವನ್ನು ಅನುಸರಿಸಲು ತಿಳಿವಳಿಕೆ ನೀಡಲಾಗುತ್ತಿದೆ. ತುರ್ತು ಪರಿಸ್ಥಿತಿಯಲ್ಲಿ ರಕ್ತವನ್ನು ಪಡೆಯವಲ್ಲಿ ರಕ್ತವನ್ನು ಹೆ.ಐ.ವಿ: ಏಡ್ಸ ಸೋಂಕು ಮುಕ್ತವೆಂದು ದೃಢೀಕರಿಸಿದ ನಂತರ ನೀಡುವಂತೆ ಎಲ್ಲಾ ರಕ್ತನಿಧಿ ಬ್ಯಾಂಕುಗಳಿಗೆ ಹಾಗೂ ಎಲ್ಲಾ ಮಟ್ಟದ ಆಸ್ಪತ್ರೆಗಳಿಗೆ ಸೂಚನೆ ನೀಡಲಾಗಿದೆ.

ಆಸ್ಪತ್ರೆಗಳಲ್ಲಿ ಸರಿಯಾದ ರೀತಿಯಲ್ಲಿ ಸಂಸ್ಕರಿಸಿದ ಸೂಜಿ ಮತ್ತು ಸಿರಿಂಜುಗಳನ್ನು, ಇತರೆ ಉಪಕರಣಗಳನ್ನು ಉಪಯೋಗಿಸಲು ತಿಳಿಸಲಾಗಿದೆ. ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿ ಲೈಂಗಿಕ ರೋಗ ಚಿಕಿತ್ಸಾ ವಿಭಾಗಕ್ಕೆ ಅಗತ್ಯ ಔಷಧ ಪೂರೈಕೆಗೆ ಕ್ರಮಕೈಗೊಳ್ಳಲಾಗಿದೆ.

ಸಾಮಾನ್ಯ ಜನರಲ್ಲಿ ಏಡ್ಸ ಬಗ್ಗೆ ಅರಿವು ಮೂಡಿಸಲು ಆಕಾಶವಾಣಿ, ದೂರದರ್ಶನ, ವೃತ್ತಪತ್ರಿಕೆಗಳಲ್ಲಿ ಏಡ್ಸ ರೋಗದ ಬಗ್ಗೆ ಜಾಹೀರಾತು ನೀಡಲಾಗುತ್ತಿದೆ.

ಜನಸಾಮಾನ್ಯರಿಗೆ ಏಡ್ಸ ರೋಗದ ಬಗ್ಗೆ ಅರಿವು ಮೂಡಿಸಲು ಅನುಕೂಲವಾಗುವಂತೆ ಕನ್ನಡ ಭಾಷೆಯಲ್ಲಿ ಭಿತ್ತಿ ಪತ್ರಗಳನ್ನು ಹಾಗೂ ಕರಪತ್ರಗಳನ್ನು ಮುದ್ರಿಸಿ ಹಂಚುವ ಕ್ರಮವನ್ನು ಕೈಗೊಳ್ಳಲಾಗಿದೆ. ಈ ದಿಶೆಯಲ್ಲಿ ಸರ್ಕಾರೇತರ ಸಂಸ್ಥೆಗಳಿಂದ ಪ್ರಕರಣಗಳು ಯಾವುದೇ ಅನಾರೋಗ್ಯ ಪರಿಸ್ಥಿತಿಗಳಲ್ಲಿ ಆಸ್ಪತ್ರೆಗಳಿಗೆ ಚಿಕಿತ್ಸೆಗಾಗಿ ಬಂದಲ್ಲಿ ಅವರಿಗೂ ಸಹ ಎಲ್ಲರಂತೆಯೇ ಚಿಕಿತ್ಸೆ ನೀಡಲು ಕ್ರಮಕೈಗೊಂಡು ಎಲ್ಲಾ ಆಸ್ಪತ್ರೆಗಳ ಮುಖ್ಯಸ್ಥರಿಗೆ ಮಾರ್ಗದರ್ಶನ ನೀಡಲಾಗಿದೆ. ಈ ಬಗ್ಗೆ ಪ್ರತಿ ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿಯ ವೈದ್ಯರುಗಳಿಗೆ ತಲಾ ಇಬ್ಬರಿಗೆ ರೋಗ ಚಿಕಿತ್ಸೆ ಬಗ್ಗೆ ತರಬೇತಿ ನೀಡಲಾಗಿದೆ.

ಇ) ಲೈಂಗಿಕ ರೋಗಗಳು (ವಿ.ಡಿ) ನಿಯಂತ್ರಣದಲ್ಲಿದೆ. ಆದರೆ ಏಡ್ಸ ರೋಗಕ್ಕೆ ಲಸಿಕೆ ಅಥವಾ ಚಿಕಿತ್ಸೆ ಲಭ್ಯವಿಲ್ಲದ ಕಾರಣ ಹರಡುತ್ತಿದೆ. ರೋಗ ಹರಡದಂತೆ ಮುಂಜಾಗರುಕತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಖಾಲಿ ಇರುವ ಚಿತ್ರಕಲಾ ಶಿಕ್ಷಕರ ಹುದ್ದೆಗಳು

163 - ಶ್ರೀ ಶಿವಾನಂದ ಎಸ್ ಪಾಟೀಲ್ (ಟಿಕೋಟಾ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಚಿತ್ರಕಲಾ ಶಿಕ್ಷಕರ ಒಟ್ಟು ಸಂಖ್ಯೆ ಎಷ್ಟು; ಹಾಗೂ ಎಂದಿನಿಂದ ಈ ಹುದ್ದೆಗಳು ಖಾಲಿ ಇರುತ್ತವೆ;

ಆ) ಹಾಗಿದ್ದಲ್ಲಿ ಈ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು?